RNU AIR DHARWAD

**FEBRUARY 04, 2025**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- ‘ಇನ್ವೆಸ್ಟ್ ಕರ್ನಾಟಕ’: ಬೆಂಗಳೂರಿನಲ್ಲಿ, 11 ರಿಂದ 14ರ ವರೆಗೆ, ಜಾಗತಿಕ ಬಂಡವಾಳ ಹೂಡಿಕೆದಾರರ, ಸಮಾವೇಶ.
- ವಿಧಾನಸೌಧದ ಆವರಣದಲ್ಲಿ, 27 ರಿಂದ ಮಾರ್ಚ್ 3ರ ವರೆಗೆ, ಪುಸ್ತಕ ಮತ್ತು ಸಾಹಿತ್ಯ ಉತ್ಸವ.
- ಚಿಕ್ಕಮಗಳೂರು ಜಿಲ್ಲೆಯಾದ್ಯಂತ, ಏಳು ಕ್ಯಾಸನೂರು ಮಂಗನ ಕಾಯಿಲೆ ಪ್ರಕರಣ ಪತ್ತೆ.
- ಬೆಂಗಳೂರಿನ ತಾತಗುಣಿ ಎಸ್ಟೇಟ್; ಪ್ರವಾಸೋದ್ಯಮದ ಭಾಗವಾಗದಿರಲಿ, ಪರಿಸರಾಸಕ್ತರ ಆಗ್ರಹ.

<><><>

**ಈಗ ವಾರ್ತೆಗಳ ವಿವರ**

<><><>

ಬೆಂಗಳೂರಿನ ಅರಮನೆ ಮೈದಾನದಲ್ಲಿ, ಈ ತಿಂಗಳ 11 ರಿಂದ 14ರ ವರೆಗೆ, ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ –‘ಇನ್ವೆಸ್ಟ್ ಕರ್ನಾಟಕ 2025’ ನಡೆಯಲಿದೆ. ವಿಧಾನಸೌಧದಲ್ಲಿ ಪೂರ್ವಭಾವಿ ಸಿದ್ಧತಾ ಸಭೆ ನಡೆಯಿತು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಭೆಯ ಬಳಿಕ ಮಾಹಿತಿ ನೀಡಿ, 10 ಲಕ್ಷ ಕೋಟಿ ರೂಪಾಯಿ ಬಂಡವಾಳವನ್ನು ರಾಜ್ಯಕ್ಕೆ ಆಕರ್ಷಿಸಲು ಗುರಿ ಹೊಂದಲಾಗಿದೆ ಎಂದರು. ಈಗಾಗಲೇ 7 ಲಕ್ಷ ಕೋಟಿ ರೂಪಾಯಿ ಬಂಡವಾಳ ಹೂಡಿಕೆ ದೃಢೀಕರಿಸಲಾಗಿದೆ. 18 ದೇಶಗಳ ಪ್ರತಿನಿಧಿಗಳು ಭಾಗಿಯಾಗಲಿದ್ದು, ಈಗಾಗಲೇ 2 ಸಾವಿರ ಹೂಡಿಕೆದಾರರು ನೋಂದಣಿ ಮಾಡಿಕೊಂಡಿದ್ದಾರೆ. ಸಮಾವೇಶದ ಸಂದರ್ಭದಲ್ಲಿ, 2025–30ರ ನೂತನ ರಾಜ್ಯ ಕೈಗಾರಿಕಾ ನೀತಿಯನ್ನು ಪ್ರಕಟಿಸಲಾಗುವುದು ಎಂದರು.

<><><>

ಕೇಂದ್ರ ಪುರಸ್ಕೃತ, ರಾಷ್ಟ್ರೀಯ ಜಾನುವಾರು ಮಿ ’ನ್ ಯೋಜನೆಯಡಿ, ಧಾರವಾಡ ಜಿಲ್ಲೆ, ನವಲಗುಂದ ತಾಲೂಕು ಮೊರಬ ಗ್ರಾಮದ ರೈತ, ಗಂಗಪ್ಪ ಕಾಲವಾಡ, ಮಾದರಿ ಕುರಿ ಸಾಕಾಣಿಕೆ ಕೇಂದ್ರ ಆರಂಭಿಸಿ, ಗಮನ ಸೆಳೆದಿದ್ದಾರೆ. ನವಲಗುಂದ ಶಾಸಕ ಎನ್.ಎಚ್.ಕೋನರಡ್ಡಿ ಹಾಗೂ ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು ಭೇಟಿ ನೀಡಿ, ಮೆಚ್ಚುಗೆ

ವ್ಯಕ್ತಪಡಿಸಿದರು. ಕೇಂದ್ರ ಸರ್ಕಾರದಿಂದ 50 ಲಕ್ಷ ರೂಪಾಯಿ ಸಹಾಯ ಧನ ಹಾಗೂ ಬ್ಯಾಂಕ್ ಸಾಲ ಸೇರಿ 50 ಲಕ್ಷ ರೂಪಾಯಿ ಯೋಜನಾ ಮೊತ್ತದ, ಕುರಿ ಸಾಕಾಣಿಕೆ ಕೇಂದ್ರವನ್ನು ಗಂಗಪ್ಪ ಆರಂಭಿಸಿದ್ದಾರೆ.

<><><>

10 ಎಕರೆ ಖುಷ್ಕಿ, ಮಳೆಯಾಶ್ರಿತ ಜಮೀನಿನಲ್ಲಿ, ಪರ್ಯಾಯ ಆದಾಯ ಮೂಲವಾಗಿ, ಕುರಿ ಸಾಕಾಣಿಕೆ ಆರಂಭಿಸಿದ್ದು, ಲಾಭದಾಯಿಕವಾಗಿದೆ ಎಂದು, ಅವರು ತಿಳಿಸಿದರು.

<><><>

ಪಶುಪಾಲನಾ ಇಲಾಖೆ ಉಪ ನಿರ್ದೇಶಕ ಡಾಕ್ಟರ್ ರವಿ ಸಾಲಿಗೌಡರ ಮಾತನಾಡಿ, ಕುರಿ ಸಾಕಾಣಿಕೆ ಕೇಂದ್ರದಲ್ಲಿ, ಆಕಸ್ಮಿಕವಾಗಿ ಕುರಿ ಮೃತಪಟ್ಟರೆ, ಪ್ರತಿ ಕುರಿಗೆ 15 ಸಾವಿರ ರೂಪಾಯಿ ಪರಿಹಾರ ನೀಡಲಾಗುತ್ತದೆ. ರಾಷ್ಟ್ರೀಯ ಜಾನುವಾರು ಮಿ ’ನ್ ಯೋಜನೆಯಡಿ, ವಿಮೆಗೆ ಒಳಪಡಿಸಲಾಗಿದೆ ಎಂದರು.

<><><>

ಸಾಹಿತಿಗಳು, ಬರೆಹಗಾರರು ಹಾಗೂ ವಿದ್ವಾಂಸರನ್ನು, ವಿಧಾನಸೌಧಕ್ಕೆ ಹತ್ತಿರವಾಗಿಸಲು, ಬರುವ 27 ರಿಂದ ಮಾರ್ಚ್ 3ರ ವರೆಗೆ, ಮೊದಲ ಬಾರಿಗೆ ವಿಧಾನಸೌಧದ ಆವರಣದಲ್ಲಿ, ಪುಸ್ತಕ ಮತ್ತು ಸಾಹಿತ್ಯ ಉತ್ಸವ ಆಯೋಜಿಸಲಾಗಿದೆ ಎಂದು, ವಿಧಾನಸಭಾ ಅಧ್ಯಕ್ಷ ಯು.ಟಿ.ಖಾದರ್ ತಿಳಿಸಿದ್ದಾರೆ.ಮಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಪುಸ್ತಕ ಉತ್ಸವದಲ್ಲಿ ಶೇಕಡ 80 ರ ’ಷ್ಟ ಕನ್ನಡ ಹಾಗೂ ಶೇಕಡ 20 ರ ’ಷ್ಟ ಇತರೆ ಭಾ ’ಗಳ 150 ಪುಸ್ತಕ ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗುವುದು. ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಲಾಗುತ್ತದೆ ಎಂದರು.

<><><>

ಶಾಸಕರು ತಮ್ಮ ಕ್ಷೇತ್ರದ ಸರ್ಕಾರಿ ಶಾಲಾ, ಕಾಲೇಜುಗಳಿಗೆ ತಲಾ 2 ರಿಂದ 3 ಲಕ್ಷ ರೂಪಾಯಿ ವರೆಗೆ, ತಮ್ಮ ನಿಧಿಯಿಂದ ಪುಸ್ತಕ ಖರೀದಿಸಿ, ಒದಗಿಸುವ ಕುರಿತಂತೆಯೂ ಕ್ರಮ ವಹಿಸಲಾಗುತ್ತಿದೆ ಎಂದು ಯು.ಟಿ.ಖಾದರ್ ಹೇಳಿದರು.

<><><>

ವಿಧಾನಸೌಧಕ್ಕೆ ಶಾಶ್ವತ ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಮಾಡಲು ನಿರ್ಧರಿಸಲಾಗಿದೆ ಎಂದು, ಅವರು ನುಡಿದರು.

<><><>

ಚಿಕ್ಕಮಗಳೂರು ಜಿಲ್ಲೆಯಾದ್ಯಂತ, 7 ಕ್ಯಾಸನೂರು ಮಂಗನ ಕಾಯಿಲೆ, ಕೆ.ಎಫ್.ಡಿ. ಪ್ರಕರಣಗಳು ಪತ್ತೆಯಾಗಿವೆ. ಸೋಂಕಿತರನ್ನು ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿದೆ ಎಂದು, ಜಿಲ್ಲಾ ಆರೋಗ್ಯಾಧಿಕಾರಿ, ಡಾಕ್ಟರ್ ಅಶ್ವತ್ಥ ಬಾಬು, ಆಕಾಶವಾಣಿಗೆ ತಿಳಿಸಿದ್ದಾರೆ. ಜಿಲ್ಲೆಯ ಕೊಪ್ಪ, ಶೃಂಗೇರಿ, ಎನ್.ಆರ್.ಪುರ ತಾಲೂಕುಗಳಲ್ಲಿ, ಕೆ.ಎಫ್.ಡಿ ಪತ್ತೆಯಾಗಿದ್ದು, ಪ್ರತ್ಯೇಕ ವಾರ್ಡ್ ತೆರೆದು ಚಿಕಿತ್ಸೆ ನೀಡಲಾಗುತ್ತಿದೆ ಎಮದು, ಜಿಲ್ಲಾ ಆರೋಗ್ಯಾಧಿಕಾರಿ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನಿಡಿದ್ದಾರೆ.

<><><>

ಡಾಕ್ಟರ್ ಅಶ್ವತ್ಥ ಬಾಬು ಧ್ವನಿ 25 ಸೆಕೆಂದುಗಳು

<><><>

ರಾಜ್ಯದಲ್ಲಿ ಒಟ್ಟು 22 ಜನ ನಕ್ಸಲರು ಶರಣಾಗಿದ್ದು, ಕರ್ನಾಟಕ ನಕ್ಸಲ್ ಮುಕ್ತ ರಾಜ್ಯವಾಗಿದೆ. ಪ್ರಸ್ತುತ ಯಾವುದೇ ನಕಲೀಯ ಚಟುವಟಿಕೆ ರಾಜ್ಯದಲ್ಲಿ ಇಲ್ಲ ಎಂದು, ಚಿಕ್ಕಮಗಳೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಂ ಅಮಾಟೆ

ಸ್ಪಷ್ಟಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿ ಹಾಗೂ ಶರಣಾಗತ ಮಾಜಿ ನಕ್ಸಲರ ಬೇಡಿಕೆಗಳನ್ನು, ಕೂಲಂಕಷವಾಗಿ ಪರಿಶೀಲಿಸಿ, ರಾಜ್ಯ ಸರ್ಕಾರ ಹಾಗೂ ನಕ್ಸಲ್ ಶರಣಾಗತಿ ರಾಜ್ಯ ಸಮಿತಿಗೆ ವರದಿ ಸಲ್ಲಿಸುವುದಾಗಿ, ಅವರು ತಿಳಿಸಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಬೆಂಗಳೂರಿನ ಕನಕಪುರ ರಸ್ತೆಯ, ತಾತಗುಣಿ ದೇವಿಕಾರಾಣಿ ರೋರಿಕ್ ಎಸ್ಟೇಟ್, ಅಪರೂಪದ ವನ್ಯಜೀವಿ ತಾಣವಾಗಿದ್ದು, ಪ್ರವಾಸೋದ್ಯಮ ಯೋಜನೆಯ ಭಾಗವಾಗಿ, 100 ಕೋಟಿ ರೂಪಾಯಿ ವೆಚ್ಚದ ಅಭಿವೃದ್ಧಿ ಯೋಜನೆಗೆ, ಚಾಲನೆ ನೀಡಲು, ಸಚಿವ ಸಂಪುಟ ತಾತ್ವಿಕ ಒಪ್ಪಿಗೆ ನೀಡಿದೆ. ಕಳೆದ 2021ರ, ಜನವರಿ 28 ರಂದು ಜರುಗಿದ, 46ನೇ ಜೀವ ವೈವಿಧ್ಯ ಮಂಡಳಿ ಸಭೆಯಲ್ಲಿ, ತಾತಗುಣಿ ಎಸ್ಟೇಟ್‌ನ್ನು ರಾಜ್ಯ ಪಾರಂಪರಿಕ ಜೀವ ವೈವಿಧ್ಯ ತಾಣ ಎಂದು ಘೋಷಿಸಲಾಗಿದೆ. ಒಟ್ಟು 467 ಎಕರೆ ತಾತಗುಣಿ ಅರಣ್ಯ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಚಟುವಟಿಕೆ ಕೈಗೊಳ್ಳದಂತೆ, ರಾಜ್ಯ ಜೀವ ವೈವಿಧ್ಯ ಮಂಡಳಿಯ ಮಾಜಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿ, ಒತ್ತಾಯಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು, ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಅನಂತ ಹೆಗಡೆ, ಅಶೀಸರ ಧ್ವನಿ 45 ಸೆಕೆಂದುಗಳು

<><><>

ಅಂತಾರಾಷ್ಟ್ರೀಯ ತರೀಭೂಮಿ, ಜೌಗು ಪ್ರದೇಶಗಳ ದಿನಾಚರಣೆ ಹಿನ್ನೆಲೆ, ಕೆರೆ, ನದಿ, ತೊರೆ, ಹಿನ್ನೀರಿನ ತಾಣಗಳು, ಸದಾ ನೀರು ಜಿನುಗುವ ಸ್ಥಳಗಳು, ಭತ್ತದ ಗದ್ದೆಗಳು, ಹೀಗೆ ಮುಖ್ಯವಾಗಿ, ಜಲವಾಸಿ ಜೀವಿಗಳಿಗೆ, ಪ್ರಧಾನ ನೆಲೆ ಒದಗಿಸುವ, ಜೌಗು ಪ್ರದೇಶಗಳ ಪೋಷಣೆ ಬಗ್ಗೆ ಜನ ಜಾಗ್ರತಿ ಕಾರ್ಯಕ್ರಮ ರಾಜ್ಯದ ವಿವಿಧೆಡೆ ಜರುಗಿದವು. ಪ್ರದೇಶ ಸಮಾಚಾರಕ್ಕಾಗಿ, ವೆಟ್ ಲ್ಯಾಂಡ್ಸ್ ಬಗ್ಗೆ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಉತ್ತರಕನ್ನಡ ಜಿಲ್ಲೆ, ಬಕ್ಕೇಮನೆಯ ಹಿರಿಯ ಪರಿಸರ ವಿಜ್ಞಾನಿ, ನಾಗೇಶ ಹೆಗಡೆ.

<><><>

ನಾಗೇಶ ಹೆಗಡೆ ಧ್ವನಿ 50 ಸೆಕೆಂದುಗಳು

<><><>

ಧಾರವಾಡ ಕೃಷಿ ಮಹಾವಿದ್ಯಾಲಯದ, ಸಂಸ್ಥಾಪಕ ಪ್ರಾಚಾರ್ಯ ಎಸ್. ಡಬ್ಲೂ. ಮೆಣಸಿನಕಾಯಿ ಅವರ ಸ್ಮರಣಾರ್ಥ, 15ನೇ ಸಂಸ್ಥಾಪನಾ ದಿನಾಚರಣೆ, ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಸಮುದಾಯ ವಿಜ್ಞಾನ ಮಹಾವಿದ್ಯಾಲಯದ, ಪ್ರೇಕ್ಷಾಗೃಹದಲ್ಲಿ ಇಂದು ಬೆಳಗ್ಗೆ 10:30ಕ್ಕೆ ಆಯೋಜಿತವಾಗಿದೆ. ಮುಖ್ಯ ಅಥಿತಿಗಳಾಗಿ, ಜಾರ್ಖಂಡ್‌ನ ರಾಂಚಿಯ, ಭಾರತೀಯ ಜೈವಿಕ ತಂತ್ರಜ್ಞಾನ ಸಂಸ್ಥೆ ನಿರ್ದೇಶಕ ಸುಜಯ ರಕ್ಷಿತ ಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಕೃಷಿ

ವಿಶ್ವವಿದ್ಯಾಲಯದ ಉಪ ಕುಲಪತಿ ಪಿ. ಎಲ್. ಪಾಟೀಲ ವಹಿಸಲಿದ್ದಾರೆ. ದಿವಗಂತ ಎಸ್. ಡಬ್ಲೂ. ಮೆಣಸಿನಕಾಯಿ ಯವರ ಪತ್ನಿ ಗೌರಾದೇವಿ ಮೆಣಸಿನಕಾಯಿ ಅವರು ಪಾಲ್ಗೊಳ್ಳಲಿದ್ದಾರೆ.

<><><>

ಇಂಗ್ಲೆಂಡಿನಲ್ಲಿ ಜೀವಕೋಶ ವಿಜ್ಞಾನ (Cytology) ಮತ್ತು ಕೋಶ ತಳಿ ವಿಜ್ಞಾನಗಳ (Cytogenetic) ಅಧ್ಯಯನದ ಬಳಿಕ, 1953 ರಿಂದ 1966 ರ ವರೆಗೆ, ಧಾರವಾಡ ಕೃಷಿ ಕಾಲೇಜಿನ ಪ್ರಾಚಾರ್ಯರಾಗಿ, ರಾಷ್ಟ್ರದಲ್ಲೇ ಅತ್ಯುತ್ತಮ ಕೃಷಿ ಅಧ್ಯಯನ, ಸಂಶೋಧನಾ ಹಾಗೂ ಕೃಷಿ ವಿಸ್ತರಣಾ ಸಂಸ್ಥೆಯನ್ನಾಗಿಸಿದ ಮಹನೀಯ, ಎಸ್.ಡಬ್ಲೂ. ಮೆಣಸಿನಕಾಯಿ.

<><><>

ಉತ್ತರಾಖಂಡ ರಾಜ್ಯದ ಡೆಹ್ರಾಡೋನ್‌ನ ಹಲ್ದ್ವಾನಿಯಲ್ಲಿ ಆಯೋಜಿತ, 38ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ, ಕರ್ನಾಟಕದ 15 ವ ’ಆದ, ಜೋನಾಥನ್ ಗವಿನ್ ಆಂಟೊನಿ, ಪುರು ’ರ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ, ಚಿನ್ನದ ಪದಕ ಗೆದ್ದಿದ್ದಾರೆ. ಹಿರಿಯ ಶೂಟರ್ ಹಾಗೂ ಒಲಿಂಪಿಕ್ ಪದಕ ವಿಜೇತರನ್ನು ಹಿಂದಿಕ್ಕಿ, ಅವರು ಈ ಸಾಧನೆ ಮಾಡಿದ್ದಾರೆ. ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಸರ್ವಿಸಸ್ 17 ಚಿನ್ನ, 10 ಬೆಳ್ಳಿ ಮತ್ತು 8 ಕಂಚಿನ ಪದಕಗಳೊಂದಿಗೆ ಅಗ್ರ ಸ್ಥಾನದಲ್ಲಿದೆ. ಕರ್ನಾಟಕ 17 ಚಿನ್ನ, 9 ಬೆಳ್ಳಿ ಮತ್ತು 9 ಕಂಚಿನ ಪದಕಗಳೊಂದಿಗೆ, 2ನೇ ಸ್ಥಾನದಲ್ಲಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಇಂದು, ವಿಶ್ವ ಕ್ಯಾನ್ಸರ್ ಜಾಗ್ರತಿ ದಿನಾಚರಣೆ. ಶೀಘ್ರ ಪತ್ತೆ, ಗುಣಮಟ್ಟದ ಚಿಕಿತ್ಸೆ, ಗುಣಮುಖತೆ ಹಾಗೂ ಉಪಶಮನ ಆರೈಕೆ ಬಗ್ಗೆ, ಜನ ಜಾಗ್ರತಿ ಮೂಡಿಸುವ ದಿನ.

<><><>

ಯಾದಗಿರಿ ಜಿಲ್ಲಾ ಮಟ್ಟದ ಸಿರಿಧಾನ್ಯ ಮತ್ತು ಸಾವಯವ ಹಬ್ಬದ ಅಂಗವಾಗಿ, ಇನ್ನು ಕೆಲವೇ ಕ್ಷಣಗಳಲ್ಲಿ, ಹೊಸ ಬಸ್ ನಿಲ್ದಾಣದಿಂದ ಸಿರಿಧಾನ್ಯ ಮ್ಯಾರಥಾನ್‌ಗೆ ಚಾಲನೆ ದೊರಕಲಿದೆ.

<><><>

ಚಾಮರಾಜನಗರದಲ್ಲಿ, ಯೂಥ್ ಫಾರ್ ಸೇವಾ ಸಂಸ್ಥೆ ಆಯೋಜಿಸಿದ್ದ, ಚಿಗುರು ಕಾರ್ಯಕ್ರಮದಲ್ಲಿ, 30 ಸರ್ಕಾರಿ ಶಾಲೆಗಳಿಂದ, ಸಾವಿರದ 300 ವಿದ್ಯಾರ್ಥಿಗಳು, 21 ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದರು.

<><><>

ಕೋಲಾರ ಜಿಲ್ಲೆ, ಟಮಕದ ಕೃಷಿ ವಿಜ್ಞಾನ ಕೇಂದ್ರದ ಸಭಾಂಗಣದಲ್ಲಿ, ಸೂಕ್ಷ್ಮ ನೀರಾವರಿ ತಾಂತ್ರಿಕತೆ ಕುರಿತು, ರೈತರಿಗಾಗಿ ಒಂದು ದಿನದ ತರಬೇತಿ ಕಾರ್ಯಾಗಾರ, ಇಂದು ಬೆಳಗ್ಗೆ 10 ಗಂಟೆಗೆ, ಆಯೋಜಿತವಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ‘ಇನ್ವೆಸ್ಟ್ ಕರ್ನಾಟಕ’: ಬೆಂಗಳೂರಿನಲ್ಲಿ, 11 ರಿಂದ 14ರ ವರೆಗೆ, ಜಾಗತಿಕ ಬಂಡವಾಳ ಹೂಡಿಕೆದಾರರ, ಸಮಾವೇಶ.
- ವಿಧಾನಸೌಧದ ಆವರಣದಲ್ಲಿ, 27 ರಿಂದ ಮಾರ್ಚ್ 3ರ ವರೆಗೆ, ಪುಸ್ತಕ ಮತ್ತು ಸಾಹಿತ್ಯ ಉತ್ಸವ.
- ಚಿಕ್ಕಮಗಳೂರು ಜಿಲ್ಲೆಯಾದ್ಯಂತ, ಏಳು ಕ್ಯಾಸನೂರು ಮಂಗನ ಕಾಯಿಲೆ ಪ್ರಕರಣ ಪತ್ತೆ.
- ಬೆಂಗಳೂರಿನ ತಾತಗುಣಿ ಎಸ್ಟೇಟ್; ಪ್ರವಾಸೋದ್ಯಮದ ಭಾಗವಾಗದಿರಲಿ, ಪರಿಸರಾಸಕ್ತರ ಆಗ್ರಹ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>